ಕರ್ನಾಟಕ ಸರ್ಕಾರ
(ಕೃಷಿ ಇಲಾಖೆ)

ಸಂಖ್ಯೆ/SFS/ADA-1/LAQ-1813/2024-25

ಕೃಷಿ ಆಯುಕ್ತರ ಕಾರ್ಯಾಲಯ,
ಶೇಷಾದ್ರಿ ರಸ್ತೆ, ಬೆಂಗಳೂರು-01
ದಿನಾಂಕ: 19.07.2024

ಇವರಿಗೆ,
ಸರ್ಕಾರದ ಕಾರ್ಯದರ್ಶಿಗಳು,
ಕೃಷಿ ಇಲಾಖೆ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನಸಭೆ ಸದಸ್ಯರಾದ ಶ್ರೀ ಗುರ್ಮೆ ಸುರೇಶ್ ಶೆಟ್ಟಿ (ಕಾಪು)ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1813 ಕ್ಕೆ ಉತ್ತರಗಳನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ: ಪತ್ರ ಸಂ: ಪ್ರಶಾವಿಸ/16ನೇ ವಿ ಸ/4ನೇ ಅ/ LAQ-1813/ 2024 ದಿನಾಂಕ:13.07.2024.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಶ್ರೀ ಗುರ್ಮೆ ಸುರೇಶ್ ಶೆಟ್ಟಿ (ಕಾಪು) ಮಾನ್ಯ ವಿಧಾನ ಸಭಾ ಸದಸ್ಯರು ಕೇಳಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1813 ಕ್ಕೆ ಉತ್ತರವನ್ನು ಸಿದ್ಧಪಡಿಸಿ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

ಲಗತ್ತು: ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1813 ಕ್ಕೆ ಉತ್ತರದ ಪ್ರತಿಗಳು.

ತಮ್ಮ ವಿಶ್ವಾಸಿ,

ಕೃಷಿ ನಿರ್ದೇಶಕರು

ಕರ್ನಾಟಕ ವಿಧಾನ ಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:	1813
2	ಉತ್ತರಿಸಬೇಕಾದ ದಿನಾಂಕ:	24/07/2024
3	ಮಾನ್ಯ ವಿಧಾನ ಸಭೆ ಸದಸ್ಯರು	ಶ್ರೀ ಗುರ್ಮೆ ಸುರೇಶ್ ಶೆಟ್ಟಿ (ಕಾಪು)
4	ಉತ್ತರಿಸಬೇಕಾದ ಸಚಿವರು	ಮಾನ್ಯ ಕೃಷಿ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಉಡುಪಿ ಜಿಲ್ಲೆಯಲ್ಲಿ ಭತ್ತದ ಬೆಳೆ ಪ್ರಮುಖ ಜೀವನೋಪಾಯ ಬೆಳೆಯಾಗಿದ್ದು, ರೈತರು ಎಂ.ಓ-4 ಭತ್ತದ ತಳಿಯ ಬೀಜವನ್ನು ಪ್ರಮುಖ ಭತ್ತದ ಬೆಳೆಯನ್ನಾಗಿ ಉಪಯೋಗಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು. ಉಡುಪಿ ಜಿಲ್ಲೆಯಲ್ಲಿ ಭತ್ತದ ಬೆಳೆ ಪ್ರಮುಖ ಜೀವನೋಪಾಯ ಬೆಳೆಯಾಗಿದ್ದು, ರೈತರು ಎಂ.ಓ-4 ಭತ್ತದ ತಳಿಯ ಬೀಜವನ್ನು ಪ್ರಮುಖ ಭತ್ತದ ಬೆಳೆಯನ್ನಾಗಿ ಉಪಯೋಗಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.
ಆ)	ಬಂದಿದ್ದಲ್ಲಿ, ರೈತರ ಬೇಡಿಕೆಗೆ ಅನುಗುಣವಾಗಿ ಎಂ.ಓ-4 ತಳಿಯ ಬೀಜವನ್ನು **ಸರಿಯಾಗಿ ಪೂರೈಕೆ ಮಾಡದೇ** ಇರುವುದರಿಂದ ರೈತರು ಸಂಕಷ್ಟಕ್ಕೆ ಈಡಾಗಿರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೇ;	2023-24 ನೇ ಸಾಲಿನಲ್ಲಿ ಬರದ ಪರಿಸ್ಥಿತಿಯಿಂದಾಗಿ ನಿರೀಕ್ಷಿತ ಪ್ರಮಾಣದಲ್ಲಿ ಪ್ರಮಾಣಿತ ಭತ್ತಎಂ.ಓ-4 ಬಿತ್ತನೆ ಬೀಜವನ್ನು ಉತ್ಪಾದನೆ ಮಾಡಲು ಸಾಧ್ಯಾವಾಗಿರುವುದಿಲ್ಲ. **ರೈತರಿಗೆ ತೊಂದರೆಯಾಗದಂತೆ ಉತ್ಪಾದನೆಯಲ್ಲಿ** ಲಭ್ಯವಾದ ಎಂ.ಓ-4 ಬಿತ್ತನೆ ಬೀಜವನ್ನು ಜಿಲ್ಲೆಗೆ ಸರಬರಾಜು ಮಾಡಲಾಗಿರುತ್ತದೆ.
ಇ)	ರೈತರ ಬೇಡಿಕೆಗನುಗುಣವಾಗಿ ಎಂ.ಓ-4 ಭತ್ತದ ತಳಿಯ ಬೀಜವನ್ನು ಸಬ್ಸಿಡಿ ದರದಲ್ಲಿ ರೈತರಿಗೆ ಸಕಾಲದಲ್ಲಿ ಪೂರೈಸಲು ಸರ್ಕಾರ ತೆಗೆದುಕೊಂಡ ಕ್ರಮಗಳು ಯಾವುವು?	ಕರ್ನಾಟಕ ರಾಜ್ಯ ಬೀಜ ನಿಗಮ(ನಿ.) ಹಾಗೂ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯ, ಶಿವಮೊಗ್ಗ ರವರು ಉತ್ಪಾದಿಸಿದ 959.96 ಕ್ವಿಂ. ಪ್ರಮಾಣಿತ ಬಿತ್ತನೆ ಬೀಜದಲ್ಲಿ ಉಡುಪಿ ಜಿಲ್ಲೆಗೆ 576.75 ಕ್ವಿಂ. ಗಳನ್ನು ಸರಬರಾಜು ಮಾಡಲಾಗಿರುತ್ತದೆ. ಪ್ರಸ್ತುತ ಸಾಲಿನಲ್ಲಿ ಎಂ.ಓ-4 ನಿಜ ಚೀಟಿ ಬಿತ್ತನೆ ಬೀಜವನ್ನು ಖರೀದಿಸಿ 249.5 ಕ್ವಿಂ.ಗಳನ್ನು ಜಿಲ್ಲೆಗೆ ಸರಬರಾಜು ಮಾಡಲಾಗಿರುತ್ತದೆ. ಎಂ.ಓ-4 ತಳಿಯ ಬಿತ್ತನೆ ಬೀಜವಲ್ಲದೆ ಎಂ.ಓ-4 ತಳಿಗೆ ಪರ್ಯಾಯವಾದ ಸಹ್ಯಾದ್ರಿ ಕೆಂಪುಮುಕ್ತಿ ಭತ್ತದ 440 ಕ್ವಿಂ. ಬಿತ್ತನೆ ಬೀಜವನ್ನು ಸರಬರಾಜು ಮಾಡಲಾಗಿರುತ್ತದೆ. ಇದರ ಜೊತೆಗೆ ಉಮಾ (196.5 ಕ್ವಿಂ) ಮತ್ತು ಜ್ಯೋತಿ (79.5ಕ್ವಿಂ) ಬಿತ್ತನೆ ಬೀಜಗಳನ್ನು ಸರಬರಾಜು ಮಾಡಲಾಗಿರುತ್ತದೆ. ಕೃಷಿ ಇಲಾಖೆಯಿಂದ ವಿತರಿಸಲಾಗುವ ಭತ್ತದ ಎಲ್ಲಾ ತಳಿಗಳ ಬಿತ್ತನೆ ಬೀಜಗಳಿಗೆ ಸಾಮಾನ್ಯ ರೈತರಿಗೆ ಪ್ರತಿಕೆ.ಜಿ.ಗೆ ರೂ.8 ರಂತೆ ಮತ್ತು ಪ.ಜಾ/ಪ.ಪಂ ರೈತರಿಗೆ ರೂ.12 ರಂತೆ ಸಹಾಯಧನವನ್ನು ನೀಡಿ ರೈತರಿಗೆ ಸಕಾಲದಲ್ಲಿ ಬಿತ್ತನೆ ಬೀಜವನ್ನು ಪೂರೈಕೆ ಮಾಡಲಾಗಿರುತ್ತದೆ.

ಕೃಷಿ ನಿರ್ದೇಶಕರು